ಪ್ರಜಾವಾಣಿ
# ಮೆಟ್ರೊ
ಬೆಂಗಳೂರಿನ ಬಣ್ಣಗಳು

ನೇಪಥ್ಯ: ಶಬ್ದಾಲಂಕಾರದ ಅಪ್ಪಯ್ಯ... 3

ಆರೋಗ್ಯ ಹೆಚ್ಚಿಸುವ ವೃಕ್ಷಗಳು... 6

ಮಂಗಳವಾರ, 15 ಮೇ 2018

ಪದಗಳಲ್ಲಿ, ಮಾತುಗಳಲ್ಲಿ ವರ್ಣಿಸಲಾಗದ್ದನ್ನು ಒಂದೇ ನೋಟದಲ್ಲೇ ಅದ್ಭುತವಾಗಿ ವಿವರಿಸುವ ಶಕ್ತಿ ಒಂದು ಚಿತ್ರಕ್ಕಿದೆ. ಬೆಂಗಳೂರಿನ ಹೇಮಾ ನಾರಾಯಣನ್ ಕಳೆದ 15 ವರ್ಷಗಳಿಂದ ಛಾಯಾಗ್ರಹಣದಲ್ಲಿ ತೊಡಗಿದ್ದಾರೆ. 'ವೈಡರ್ ಆ್ಯಂಗಲ್ಸ್' ಎಂಬ ಛಾಯಾಗ್ರಹಣ ಸಂಸ್ಥೆ ನಡೆಸುತ್ತಿರುವ ಅವರಿಗೆ ಛಾಯಾಗ್ರಹಣ ವೃತ್ತಿ, ಪ್ರವೃತ್ತಿ ಎರಡೂ ಸಹ. ಅವರು ತಮ್ಮ ಫೋಟೊಗ್ರಫಿ ಜರ್ನಿ ಬಗ್ಗೆ 'ಮೆಟ್ರೊ' ಜತೆ ಮಾತನಾಡಿದ್ದಾರೆ

ಹೇಮಾ ನಾರಾಯಣ್

# ಹೇಮಾಯಾನ, ಚಿತ್ರಗಾನ

ಸಂದರ್ಶನ: ಸುಮನಾ ಕೆ.



ಲಡಾಕ್‌ನ ಪಾಂಗಾಂಗ್ ಸರೋವರದ ಸುಂದರ ನೋಟ

ಆರಂಭದ ದಿನಗಳು...

ನಾನು ಎಂ.ಟೆಕ್ ಮುಗಿಸಿದ ಬಳಿಕ ಐ.ಟಿ ಕ್ಷೇತ್ರ ಸೇರಿದೆ. ನನಗೆ ಕೆಲಸದ ನಿಮಿತ್ತ ಬೇರೆ ಬೇರೆ ದೇಶ ಸುತ್ತುವ ಅವಕಾಶ ಸಿಕ್ಕಿತು. ಆಗ ನನ್ನಲ್ಲಿ ಅನಲಾಗ್ ಕ್ಯಾಮೆರಾ ಇತ್ತು. ಎಲ್ಲಿ ಹೋದರೂ ಕ್ಯಾಮೆರಾ ತೆಗೆದುಕೊಂಡು ಹೋಗುತ್ತಿದ್ದೆ. ಅಲ್ಲಿನ ಪ್ರೇಕ್ಷಣೀಯ ಸ್ಥಳಕ್ಕೆ ಭೇಟಿ ನೀಡಿದಾಗ ಸುಂದರ ದೃಶ್ಯಗಳನ್ನು ಕಂಡಾಗ ಸುಮ್ಮನೆ ಫೋಟೊಗಳನ್ನು ಕ್ಲಿಕ್ಕಿಸುತ್ತಿದ್ದೆ. ಆ ಫೋಟೊಗಳ ಪ್ರಿಂಟ್ ತೆಗೆದಾಗ ಫೋಟೊಗಳೂ ವಿಭಿನ್ನವಾಗಿವೆ, ನೈಜವಾಗಿವೆ ಎಂದು ಅಭಿಪ್ರಾಯ ಬರುತ್ತಿತ್ತು. ಅಲ್ಲಿಂದ ಫೋಟೊಗ್ರಫಿಯನ್ನು ಹವ್ಯಾಸವನ್ನಾಗಿ ಆರಂಭಿಸಿದೆ. ಎರಡು - ಮೂರು ವರ್ಷಗಳಲ್ಲಿ ಕ್ಯಾಮೆರಾ ಬೆಸ್ಟ್ ಫ್ರೆಂಡ್ ಆಗೋಯ್ತು.

**● ನಿಮ್ಮ ಫೋಟೊಗ್ರಫಿ ಬಗ್ಗೆ**

ಟ್ರಾವೆಲ್‌ನಿಂದ ನನಗೆ ಫೋಟೊಗ್ರಫಿ ಗೀಳು ಬೆಳೆದಿದ್ದು. ಟ್ರಾವೆಲ್ ಫೋಟೊಗ್ರಫಿ ಸೇರಿ ಕಮರ್ಷಿಯಲ್, ಪ್ರಾಡಕ್ಟ್, ಸ್ಟ್ರೀಟ್, ಫುಡ್ , ವೈಲ್ಡ್ ಲೈಫ್, ಲ್ಯಾಂಡ್ ಸ್ಕೇಪ್, ಹೆರಿಟೇಜ್, ಆರ್ಕಿಟೆಕ್ಟ್, ಆಸ್ಟ್ರೋ, ನೇಚರ್, ಪೀಪಲ್ ಫೋಟೊಗ್ರಫಿ ಎಲ್ಲಾ ನನ್ನ ಆಸಕ್ತಿಗಳು. ಇತ್ತೀಚೆಗೆ ನಾನು ಫೈನ್ ಆರ್ಟ್ಸ್ ಫೋಟೊಗ್ರಫಿಯನ್ನು ಆರಂಭಿಸಿದ್ದೇನೆ. 2002ರಲ್ಲಿ ನನ್ನಲ್ಲಿ ಅನಲಾಗ್ ಕ್ಯಾಮೆರಾ ಇತ್ತು. ಅದರಲ್ಲೇ ನಾನು ಚಿತ್ರಗಳನ್ನು ತೆಗೆಯಲು ಆರಂಭಿಸಿದೆ. ಅದಾದ ಬಳಿಕ ಡಿಎಸ್‌ಎಲ್‌ಆರ್ ಕ್ಯಾಮೆರಾ ಬಂತು. ಅನುಭವದಿಂದ ಕಲಿತಿದ್ದೇ ಜಾಸ್ತಿ. ಬೆಂಗಳೂರು ಸ್ಕೂಲ್ ಆಫ್ ಛಾಯಾಗ್ರಹಣದಲ್ಲಿ 'ಬೇಸಿಕ್ಸ್ ಆಫ್ ಫೋಟೊಗ್ರಫಿ' ಬಗ್ಗೆ ಕೋರ್ಸ್ ಮಾಡಿದ್ದೆ. ಐಹೊಳೆ, ಹಂಪಿ, ಅಮೆರಿಕ, ಲಂಡನ್, ಚೀನಾ ಮೊದಲಾದ ಸ್ಥಳಕ್ಕೆ ಹೋದಾಗ ಅನುಭವಗಳಿಂದಲೇ ಕಲಿಯುತ್ತಾ ಹೋದೆ.

**● ನಿಮ್ಮ ವೈಲ್ಡ್‌ಲೈಫ್ ಫೋಟೊಗ್ರಫಿ ಬಗ್ಗೆ ಹೇಳಿ**

ಮೂರು ವರ್ಷದ ಹಿಂದೆ ಆಫ್ರಿಕಾದ ಕೀನ್ಯಾದಲ್ಲಿ ಬೇರೆ ಬೇರೆ ಅರಣ್ಯಕ್ಕೆ ಹೋಗಿ ಅಲ್ಲಿನ ಪ್ರಾಣಿಪ್ರಪಂಚದ ಚಿತ್ರಗಳನ್ನು ಸೆರೆಹಿಡಿದಿದ್ದೆ. ಅರಣ್ಯಕ್ಕೆ ಹೋದಾಗ ತಾಳ್ಮೆ ಬೇಕು. ಆಫ್ರಿಕಾದ ಕಾಡುಗಳು ದಟ್ಟವಾಗಿವೆ. ಅಲ್ಲಿ ತೆಗೆದ ಚಿತ್ರಗಳು ಹಾಗೂ ಲೇಖನ 'ಆಫ್ರಿಕಾ ಜಿಯೋಗ್ರಫಿ'ಯಲ್ಲಿ ಪ್ರಕಟವಾಗಿದೆ.

ಲೇಹ್‌ನ ಶಾಂತಿ ಸ್ತೂಪದ ನೋಟ

**● ಕಾಫಿ ಟೇಬಲ್ ಬುಕ್ ಬಗ್ಗೆ ಹೇಳಿ**

10 ವರ್ಷಗಳ ಹಿಂದೆ ಕರ್ನಾಟಕದ ಬಗ್ಗೆ ಕಾಫಿ ಟೇಬಲ್ ಬುಕ್ ಯಾಕೆ ಮಾಡಬಾರದು ಎಂದು ಹೊಳೆಯಿತು. ಆಗ ನಾನು ಐದು ಜನ ಫೋಟೊಗ್ರಾಫರ್ ಸೇರಿಕೊಂಡು ಕರ್ನಾಟಕ ಪೂರ್ತಿ ಸುತ್ತಾಡಿದೆವು. ಉತ್ತರ, ದಕ್ಷಿಣ, ಕರಾವಳಿ ಹೀಗೆ ಒಬ್ಬರು ಒಂದೊಂದು ಕಡೆ ತಿರುಗಾಡಿ ಕರ್ನಾಟಕದ ಸಂಸ್ಕೃತಿ, ಶ್ರೀಮಂತಿಕೆಯನ್ನು ತೋರಿಸುವ ಫೋಟೊಗಳನ್ನು ಸಂಗ್ರಹಿಸಿದೆವು. 2006ನಿಂದ 2009ರವರೆಗೆ ಆರು ಜನ ಕೆಲಸ ಮಾಡಿದೆವು. ಆದರೆ ದುರದೃಷ್ಟವಶಾತ್ ಇದನ್ನು ಕೃತಿಯನ್ನಾಗಿ ಪ್ರಕಟಿಸಲು ಸಾಧ್ಯವಾಗಲಿಲ್ಲ. ಚಿತ್ರಕಲಾ ಪರಿಷತ್‌ನಲ್ಲಿ 'ಪ್ರತಿಬಿಂಬ- ರಿಫ್ಲೆಕ್ಷನ್ ಆಫ್ ಕರ್ನಾಟಕ' ಎಂದು ಛಾಯಾಗ್ರಹಣ ಪ್ರದರ್ಶನ ನಡೆಸಿದೆವು.

**● ಈ ಕ್ಷೇತ್ರದಲ್ಲಿ ಮಹಿಳೆಯರ ಸವಾಲುಗಳು**

ಸುರಕ್ಷೆ. ಗ್ರಾಮೀಣ ನಿರ್ಜನ ಪ್ರದೇಶಗಳಲ್ಲಿ ಮಹಿಳೆಯರಲ್ಲಿ ಒಬ್ಬೊಬ್ಬರೇ ಹೋಗುವುದು ಕಷ್ಟ. ಗುಂಪಿನಲ್ಲಿ ಅಥವಾ ಯಾರಾದರೊಬ್ಬರು ಜೊತೆಗಿರಲೇಬೇಕಾಗುತ್ತದೆ. ಕೆಲವೊಂದು ಪ್ರಾಜೆಕ್ಟ್‌ಗಳನ್ನು ಇದೇ ಕಾರಣಕ್ಕೆ ಕೈಬಿಟ್ಟಿದ್ದಿದೆ. ನನಗೆ ಯಾವುದು ಸುರಕ್ಷಿತ ಸ್ಥಳ ಎಂಬುದನ್ನು ಮೊದಲು ಗಮನಿಸುತ್ತೇನೆ. ಕ್ಯಾಮೆರಾ ಕೈಯಲ್ಲಿ ಹಿಡಿದುಕೊಂಡಿದ್ದಾರೆ ಎಂದರೆ ವಿಚಿತ್ರವಾಗಿ ನೋಡುತ್ತಾರೆ. ಅವರಿಗೆ ನಮ್ಮ ಸ್ಥಿತಿಯನ್ನು ಅರ್ಥ ಮಾಡಿಸಬೇಕು. ಅಂತಹ ವೇಳೆ ಗುಂಪಿನಲ್ಲಿ ಒಬ್ಬ ಸಾಮಾನ್ಯನಾಗಿ ಇದ್ದು ಸುತ್ತ ಗಮನಿಸಿ, ಫೋಟೊ ತೆಗೆಯುತ್ತೇನೆ. ಇದಲ್ಲದೇ ಇಲ್ಲಿ ಪ್ರಯಾಣ ತುಂಬಾ ಮಾಡಬೇಕು. ಮನೆ ಜವಾಬ್ದಾರಿಯನ್ನೂ ವಹಿಸಿಕೊಳ್ಳಬೇಕು.

**● ನಿಮ್ಮ ಸಂಸ್ಥೆ ವೈಡರ್ ಆ್ಯಂಗಲ್ಸ್ ಬಗ್ಗೆ ಹೇಳಿ**

2009ರಲ್ಲಿ ಐ.ಟಿ ಕ್ಷೇತ್ರಕ್ಕೆ ರಾಜೀನಾಮೆ ನೀಡಿ ಫೋಟೊಗ್ರಫಿ ಕಾರ್ಯಾಗಾರಗಳನ್ನು ಆರಂಭಿಸಿದೆ. ಬೇಸಿಕ್ಸ್‌ನಿಂದ ಹಿಡಿದು ಬೇರೆ ಬೇರೆ ರೀತಿಯ ಫೋಟೊಗ್ರಫಿ, ಫೋಟೊಶಾಪ್ ಬಗ್ಗೆ ಹೇಳಿಕೊಡಲಾರಂಭಿಸಿದೆ. 2013ನಲ್ಲಿ ವೈಡರ್ ಆಂಗಲ್ಸ್ ಸಂಸ್ಥೆ ಆರಂಭಿಸಿದೆ. ಇದರಲ್ಲಿ ವರ್ಕ್ ಶಾಪ್, ಫೋಟೊವಾಕ್ ಹಾಗೂ ಫೋಟೊ ಜರ್ನಿ ನಡೆಸಲಾಗುತ್ತದೆ. ಇಲ್ಲಿ ಈಗ 400ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ಇಲ್ಲಿ 9ವರ್ಷದಿಂದ 60ವರ್ಷದವರೆಗೆ ಆಸಕ್ತರಿಗೆ ಫೋಟೊಗ್ರಫಿ ಹೇಳಿಕೊಡಲಾಗುತ್ತದೆ.

**● 'ಎಕ್ಸ್‌ಪೀರಿಯೆನ್ಸ್ ಇಂಡಿಯಾ' ಫೋಟೊ ವಾಕ್ ಏನು?**

ನಾನು ಹಾಗೂ ನನ್ನ ವಿದ್ಯಾರ್ಥಿಗಳ ಗುಂಪು ದೇಶದ ಪ್ರಸಿದ್ಧ ಐತಿಹಾಸಿಕ, ಧಾರ್ಮಿಕ, ಪ್ರೇಕ್ಷಣೀಯ ಸ್ಥಳಗಳಿಗೆ ತೆರಳಿ ಅಲ್ಲಿನ ಸೌಂದರ್ಯ, ಇತಿಹಾಸವನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯುವುದು. ಒಂದೇ ಸ್ಥಳದಲ್ಲಿ ಎರಡು ಮೂರು ದಿನ ಉಳಿದುಕೊಂಡು ಫೋಟೊಗಳ ಮೂಲಕ ಅಲ್ಲಿನ ಇತಿಹಾಸವನ್ನು ಸೆರೆ ಹಿಡಿಯುತ್ತೇವೆ. ಇಲ್ಲಿಯವರೆಗೂ ಕರ್ನಾಟಕದ ಪ್ರಮುಖ ಸ್ಥಳಗಳು, ರಾಜಸ್ತಾನ, ದೆಹಲಿ, ಲಡಾಕ್ ಸೇರಿದಂತೆ 9 ರಾಜ್ಯಗಳಲ್ಲಿ ಈ ರೀತಿ ಫೋಟೊ ಶೂಟ್ ಮಾಡಿದ್ದೇವೆ. ಭವಿಷ್ಯದಲ್ಲಿ ಈ ಚಿತ್ರಗಳನ್ನು ಪ್ರದರ್ಶನ ಮಾಡುವ ಯೋಚನೆ ಇದೆ. ಇದಲ್ಲದೇ ಬೆಂಗಳೂರಿನಲ್ಲಿ ವಿದ್ಯಾರ್ಥಿಗಳಿಗೆ ಅರ್ಧ ದಿನ ಫೋಟೊ ಕಾರ್ಯಾಗಾರ ಮಾಡಿ, ಯಾವುದಾದರೂ ಸ್ಥಳಕ್ಕೆ ಕರೆದುಕೊಂಡು ಹೋಗಿ ಆರ್ಕಿಟೆಕ್ಟ್ ಫೋಟೊಗ್ರಫಿ, ಸ್ಟ್ರೀಟ್ ಫೋಟೊಗ್ರಫಿ ಬಗ್ಗೆ ವಿದ್ಯಾರ್ಥಿಗಳನ್ನು ಪ್ರಾಯೋಗಿಕ ಕಲಿಕೆ ನಡೆಸುತ್ತೇನೆ.

**● ಮೆಚ್ಚಿನ ಚಿತ್ರ**

ಕಳೆದ ವರ್ಷ ಲಡಾಕ್‌ಗೆ ಹೋಗಿದ್ದಾಗ ಅಲ್ಲೇ ಒಂದು ಕಾಫಿ ಅಂಗಡಿಯಲ್ಲಿ ಆಕಾಶ ದಿಟ್ಟಿಸುತ್ತಿದ್ದೆ. ನಾನು ನೋಡುತ್ತಿದ್ದಂತೆ ಬೆಟ್ಟದ ಸಾಲಿನಲ್ಲಿ ಬಣ್ಣಗಳ ಓಕುಳಿ ಮೂಡುತ್ತಾ ಹೋಯಿತು. ಆಕಾಶದ ತುಂಬ ಬಣ್ಣ ಚೆಲ್ಲಿದೆಯೇನೋ ಎಂಬಂತೆ ಕಾಮನಬಿಲ್ಲು ಮೂಡಿತ್ತು. ನನ್ನ ಜೀವನದಲ್ಲಿ ನೋಡಿದ ಅದ್ಭುತ ದೃಶ್ಯ ಅದು. ದುರಂತ ಅಂದ್ರೆ ಅವತ್ತು ಕ್ಯಾಮೆರಾ ತೆಗೆದುಕೊಂಡು ಹೋಗಿರಲಿಲ್ಲ. ಮೊಬೈಲ್‌ನಲ್ಲೇ ಆ ದೃಶ್ಯವನ್ನು ಸೆರೆ ಹಿಡಿದೆ. ಸುಮಾರು 20 ನಿಮಿಷ ಕಾಮನಬಿಲ್ಲು ಚಿತ್ತಾರ ಬೆಟ್ಟದ ತುಂಬ ಇತ್ತು.

# ಸಂಗೀತ ಲೋಕದ ಹೊಸ ಟಿಸಿಲು

**ಶಾಲಾ ದಿನಗಳಲ್ಲಿ ಎಲ್ಲರಂತೆ ಹಾಡು ಗುನುಗುತ್ತಿದ್ದ ಈ ಹುಡುಗ ಅದನ್ನೇ ವೃತ್ತಿಯಾಗಿಸಿಕೊಳ್ಳುವ ಹಂತಕ್ಕೆ ಬೆಳೆದಿರುವುದು ಮನೆಯವರಿಗೂ ಅಚ್ಚರಿ ಮೂಡಿಸಿದೆ. ಮ್ಯೂಸಿಕ್ ಆಲ್ಬಮ್‌ಗಳಲ್ಲಿ ಗಾಯನದ ಜೊತೆ ಅಭಿನಯ ಚಾತುರ್ಯವನ್ನೂ ತೋರಿದ್ದಾರೆ ರುಮಿತ್. ಖ್ಯಾತ ಗಾಯಕಿ ಅನುರಾಧಾ ಭಟ್ ಅವರು ರುಮಿತ್ ಜೊತೆ ಹಾಡಿ, ಅಲ್ಬಮ್ ಅನ್ನು ಮತ್ತಷ್ಟು ರೋಮ್ಯಾಂಟಿಕ್ ಆಗಿಸಿದ್ದಾರೆ**

ಅಮೃತ ಕಿರಣ ಬಿ.ಎಂ.

ರುಮಿತ್

**ಆ ಬಾನಿಗೆ** ಬಾನಾಡಿ ಕೂಡಿ.. ಬಾನಗಲ ಹಾರಾಡುವಾ
ಸುಳಿಗಾಳಿಗೆ ಪರಿಮಳವು ಕೂಡಿ.. ಜಗವೆಲ್ಲಾ ಘಮವಾಗುವಾ
ಈ ಕೂಡಿ ಹಾಡೋ ಜೋಡಿ ಜಗದ ವಿಸ್ಮಯ
ಆ ಕೂಡಿ ಹಾಡೋ ಹೆಸರೇ ಗೆಳೆತನ..

-ಗೆಳೆತನ, ಅದರ ಬಾಂಧವ್ಯ ಮತ್ತು ಮಾಧುರ್ಯವನ್ನು ಉಣಬಡಿಸುವಈ ಸಾಲುಗಳ ಪ್ರತಿ ಪದದಲ್ಲೂ ಲಾಲಿತ್ಯವಿದೆ. ಸಾಹಿತ್ಯಕ್ಕೆ ಸರಿಸಮನಾಗಿ ಸಂಗೀತದ ಓಘವಿದೆ. ಹಾಡಿಗೆ ದನಿಯಾದ ಕಂಠದಲ್ಲಿ ಭಾವ ಪರವಶತೆಯಿದೆ. ಹೌದು, ಕೇಳುಗರನ್ನು ಉಲ್ಲಸಿತಗೊಳಿಸುತ್ತಿರುವ 'ಗೆಳೆತನ' ಆಲ್ಬಮ್, ಯೂಟ್ಯೂಬ್‌ನಲ್ಲಿ ಈಗ ಜನಜನಿತ. ಪದಗಳಿಗೆ ಮುತ್ತು ಪೋಣಿಸಿದಂತೆ ರಾಗಗಳ ಜೊತೆ ಲಾಸ್ಯವಾಡಿದ ಯುವ ಗಾಯಕ ರುಮಿತ್ ಕೆ. ಸದ್ಯ ಸಂಗೀತ ಕ್ಷೇತ್ರದ ಹೊಸ ಭರವಸೆ.

ಬೆಳ್ಳಗಿನ ಮೊಗ, ಅದಕ್ಕೊಪ್ಪುವ ಕನ್ನಡಕ, ಗುಂಗುರು ಕೂದಲು, ನಕ್ಕರೆ ಸಕ್ಕರೆ. ರುಮಿತ್ ಇರೋದು ಹೀಗೆ. ಈ ಯುವ ಗಾಯಕನ ಗೆಳತನ ಆಲ್ಬಮ್ ಅನ್ನು ಅಲ್ಪಾವಧಿಯಲ್ಲೇ 1 ಲಕ್ಷದ 25 ಸಾವಿರಕ್ಕೂ ಹೆಚ್ಚು ಜನ ಮೆಚ್ಚಿದ್ದಾರೆ. ಹಿಂದಿ ಭಾಷೆಯಲ್ಲೂ ಇದು ಬಿಡುಗಡೆಯಾಗಿದೆ. ಮತ್ತೊಂದು ಆಲ್ಬಮ್ ತಯಾರಿಗೂ ಇದು ಸ್ಫೂರ್ತಿಯಾಗಿರುವುದು ಇದೇ ಕಾರಣಕ್ಕೆ. ಚೊಚ್ಚಲ ಪ್ರಯತ್ನದಲ್ಲೇ ಯಶಸ್ಸು ಬೆನ್ನಿಗೆ ಕಟ್ಟಿಕೊಂಡ ರುಮಿತ್ ಅವರ ಎರಡನೇ ಆಲ್ಬಮ್ 'ಮನಸೇ ನಿನ್ನಾ ದಾರಿಯು ಎಲ್ಲಿಗೆ..' ಬಿಡುಗಡೆಗೆ ಸಿದ್ಧವಾಗಿದೆ.

ಹುಟ್ಟಿದ್ದು ಬೆಂಗಳೂರಿನಲ್ಲಿ. ಅಲ್ ಖತೀಬ್ ಕಾಲೇಜಿನಲ್ಲಿ ಈಗ ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆಯುತ್ತಿರುವ ಇವರಿಗೆ ರುಮಿತ್ ಎಂಬ ಹೆಸರು ಇಟ್ಟಿದ್ದೂ ಕೊಂಚ ವಿಶೇಷ. ಈ ಹಿಂದೆ ಪ್ರಸಾರವಾಗುತ್ತಿದ್ದ 'ಬೂಗಿ ವೂಗಿ' ಟಿ.ವಿ ನೃತ್ಯ ಕಾರ್ಯಕ್ರಮದಲ್ಲಿದ್ದ ರುಮಿತ್ ಎಂಬ ಪಂಜಾಬಿ ಹುಡುಗನ ಹೆಸರನ್ನೇ ಇವರ ಚಿಕ್ಕಮ್ಮ ಆಯ್ಕೆ ಮಾಡಿದರು. ಹೆಸರು ಪಂಜಾಬಿ ತರ ಇದ್ದರೂ ಇವರು ಪಕ್ಕಾ ಕನ್ನಡಿಗ.

ತಂದೆ ರವಿ ಕಮಲಾಪುರ್‌ಕರ್ ಗುಲ್ಬರ್ಗಾದವರು. ಈಗ ಬೆಂಗಳೂರಿನಲ್ಲಿ ಪೊಲೀಸ್ ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ರುಮಿತ್ ಸಂಗೀತ ಪಯಣ ಶುರುವಾಗಿದ್ದು ಆರನೇ ವಯಸ್ಸಿನಲ್ಲಿ. ಹಾಡಬೇಕು ಎಂಬ ಅದಮ್ಯ ಹಂಬಲಕ್ಕೆ ನೀರೆರೆದು ಪೋಷಿಸಿದವರು ತಾಯಿ ಸ್ವರ್ಣ ಹಾಗೂ ತಂದೆ ರವಿ ಕಮಲಾಪುರ್‌ಕರ್. ಸಿನಿಮಾ ಗೀತೆ ಹಾಡಿದ್ದಕ್ಕೆ ಎಂಟನೇ ತರಗತಿಯಲ್ಲಿ ಬಹುಮಾನ ಪಡೆದರು.

ಆ ಕೆ ಸ್ಟ್ರಾ ಗಳಲ್ಲಿ ಹಾಡಿದಾಗ ಜನ ತಲೆದೂಗಿದರು. ಗಾಯನದಲ್ಲೇ ಮುಂದುವರಿಯಬೇಕು ಎಂಬ ಆಸ್ಥೆಗೆ ಪ್ರೋತ್ಸಾಹದೊರೆಯುತ್ತಾ ಹೋಯಿತು.

ಇನ್ನಷ್ಟು ಕಲಿಯುವ ಹಂಬಲಕ್ಕೆ ಸಮರ್ಥ ಗುರುವೊಬ್ಬರು ಬೇಕಿದ್ದರು. ಹಿಂದೂಸ್ತಾನಿ ಗಾಯಕ ಪಂಡಿತ್ ಶರಣ್ ಚೌಧರಿ ಅವರ ಕುರಿತು ಪ್ರಜಾವಾಣಿಯಲ್ಲಿ ಪ್ರಕಟವಾದ ಲೇಖನವು ರುಮಿತ್ ಅವರಿಗೆ ಶಿಷ್ಯಮಾನ್ಯ ಗುರುವೊಬ್ಬರನ್ನು ಹುಡುಕಿಕೊಟ್ಟಿತು. ಶರಣ್ ಅವರ ಬಳಿ ರುಮಿತ್ ರಾಗಾಲಾಪಕ್ಕೆ ಮತ್ತಷ್ಟು ಹೊಳಪು ಸಿಕ್ಕಿತು. ರುಮಿತ್‌ಗೆ ಸಂಗೀತದ ಬಗೆಗಿದ್ದ ಆಸಕ್ತಿ, ಸ್ವರಜ್ಞಾನ ಗುರುಗಳಿಗೂ ಹಿಡಿಸಿತು. ಇವರೀಗ ಹಿನ್ನೆಲೆ ಗಾಯನ, ಹಿಂದೂಸ್ತಾನಿ ಸಂಗೀತ ಹಾಗೂ ಕೀಬೋರ್ಡ್ ಅಭ್ಯಸಿಸುತ್ತಿದ್ದಾರೆ.

## ಗೆದ್ದಿತು 'ಗೆಳೆತನ'

**ರುಮಿತ್‌ಗೆ ಬಾಲಿವುಡ್‌ನ** ಮೆಲೊಡಿ ಹಾಡುಗಳೆಂದರೆ ಅಚ್ಚುಮೆಚ್ಚು. ಇಷ್ಟದ ಹಾಡುಗಳನ್ನು ಗುನುಗುತ್ತಿರುವುದು ಅವರ ಸ್ವಭಾವ. ಸ್ವರಗಳ ಮೇಲೆ ಒಂದಿಷ್ಟು ಹಿಡಿತ ಸಿಕ್ಕಿತು. ಹೊಸದನ್ನೇನಾದರೂ ಮಾಡುವ ಆಲೋಚನೆಯ ಫಲವಾಗಿ ಹೊಳೆದದ್ದೇ ಮ್ಯೂಸಿಕ್ ಆಲ್ಬಮ್. ಶ್ರೀಹರಿ ಧೂಪದ್ ಅವರ ಸಾಹಿತ್ಯಕ್ಕೆ ಶರಣ್ ಚೌಧರಿ ಸಂಗೀತ ಒದಗಿಸಿದರು.

ವಿಜಯ್ ವಿ. ಅವರು ಹಿಂದಿ ಅವತರಣಿಕೆಗೆ ಸಾಹಿತ್ಯ ಬರೆದಿದ್ದಾರೆ. ಮಂಗಳೂರು, ಮಡಿಕೇರಿ, ದೇವನಹಳ್ಳಿಯಲ್ಲಿ ಶೂಟಿಂಗ್ ನಡೆಯಿತು. ಗಾಯಕನೊಳಗಿದ್ದ ಕಲಾವಿದ ಅವಿರ್ಭವಿಸಿದ್ದು ಹೀಗೆ. ನಂತರದ್ದೆಲ್ಲ ಯಶಸ್ಸಿನ ಪಯಣ. ಎರಡನೇ ಪ್ರಯತ್ನ 'ಮನಸೇ ನಿನ್ನಾ ದಾರಿಯು ಎಲ್ಲಿಗೆ..' ಅಲ್ಬಮ್ ಕೂಡಾ ಸೆಟ್ಟೇರಿತು.

ಕನ್ನಡ ಖ್ಯಾತ ಹಿನ್ನೆಲೆ ಗಾಯಕಿ ಅನುರಾಧಾ ಭಟ್ ಜೊತೆ ಮೀಸೆಚಿಗುರಿದ ಹುಡುಗ ಮೋಹಕವಾಗಿ ಹಾಡಿ ಸೈ ಎನಿಸಿಕೊಂಡಿದ್ದಾರೆ. ಜಿಂದಾಲ್ ಸಿಟಿಯಲ್ಲಿ ಶೂಟಿಂಗ್ ನಡೆಯಿತು. ಈ ರೊಮ್ಯಾಂಟಿಕ್ ಗೀತೆಗೆ ಧನುಶ್ರೀ ಅವರು ರುಮಿತ್ ಜೊತೆ ಹೆಜ್ಜೆ ಹಾಕಿದ್ದಾರೆ.

ರುಮಿತ್ ಹಾಡುಗಾರಿಕೆಯನ್ನು ಮೆಚ್ಚಿದ ನಟ, ನಿರ್ಮಾಪಕ ಪ್ರದೀಪ್ ಅವರು ತಮ್ಮ ಚಿತ್ರದಲ್ಲಿ ಹಾಡುವಂತೆ ಆಹ್ವಾನ ನೀಡಿದ್ದಾರೆ. ಚಿತ್ರರಂಗದಲ್ಲೇ ನೆಲೆಯೂರುವ ಅದಮ್ಯ ಬಯಕೆ ಹೊಂದಿರುವ ರುಮಿತ್‌ಗೆ ಸಂಗೀತ ನಿರ್ದೇಶನದಲ್ಲೂ ತೊಡಗಿಸಿಕೊಳ್ಳುವ ಉಮೇದು ಇದೆ. ಮುಂದೊಂದು ದಿನ ನಾಯಕನಟನಾಗಿ ಬೆಳ್ಳಿ ತೆರೆಯಲ್ಲೂ ಕಾಣಿಸಿಕೊಳ್ಳುವ ಆಸೆ ಇದೆ.

ಗೆಳೆತನದ ಕೊಂಡಿಗೆ https://youtu.be/dfEfLVpIHRk ಕ್ಲಿಕ್ಕಿಸಿ

ನಾದ ಲೋಕ

# ಶಂಶೇರಾದಲ್ಲಿ ವಾಣಿ ಕಪೂರ್

ಬಾಲಿವುಡ್

**ಯಶ್‌ರಾಜ್** ಫಿಲ್ಮ್‌ನ ಮುಂದಿನ ಪ್ರಾಜೆಕ್ಟ್ 'ಶಂಶೇರಾ'. ರಣಬೀರ್ ಕಪೂರ್ ನಾಯಕ ಎಂದಾಗಲೇ ನಿರ್ಧಾರವಾಗಿದೆ. ಇದೀಗ ರಣಧೀರ್ ಕಪೂರ್‌ಗೆ ನಾಯಕಿಯಾಗಿ ವಾಣಿಕಪೂರ್ ನಟಿಸಲಿದ್ದಾರೆ ಎಂಬ ಸುದ್ದಿ ಬಿ ಟೌನ್‌ನಲ್ಲಿದೆ. ಇದಕ್ಕೆ ವಾಣಿಕಪೂರ್ ಸಹ ಆಗಲೇ ಸಹಮತಿ ಒತ್ತಿದ್ದಾಗಿದೆ.

29 ವರ್ಷದ ವಾಣಿ ಈ ಹಿಂದೆ ಬೇಫಿಕ್ರೆ ಚಿತ್ರದಲ್ಲಿ ರಣವೀರ್ ಸಿಂಗ್ ಜೊತೆಗೆ ನಟಿಸಿದ್ದರು. ರಣವೀರ್ ಜೊತೆಗಿನ ಬಿಸಿಬಿಸಿ ಮುತ್ತಿನ ದೃಶ್ಯಗಳಿಂದಾಗಿ ಚರ್ಚೆಯಲ್ಲಿದ್ದರು. ಸಂದರ್ಶನವೊಂದರಲ್ಲಿ ಅಂತೂ ಬೇಫಿಕ್ರೆ ಚಿತ್ರದಲ್ಲಿ ಮುತ್ತಿಡುವ ದೃಶ್ಯಕ್ಕೆ ಯಾವ ತಯಾರಿಯೂ ಬೇಕಿರಲಿಲ್ಲ. ಅದೆಷ್ಟು ಸಲ ಮುತ್ತಿಟ್ಟಿದ್ದವೆಂದರೆ ಅದು ಕೇವಲ ಒಂದು ಕ್ರಿಯೆಯಾಗಿ ಬದಲಾಗಿತ್ತು. ಸ್ಯಾಂಡ್‌ವಿಚ್ ತಿನ್ನುತ್ತಲೂ ಮುತ್ತಿಡುತ್ತಿದ್ದೆವು ಎಂದು ಹೇಳಿ ಸುದ್ದಿಯಾಗಿದ್ದರು.

ಶುದ್ಧ ದೇಸಿ ರೋಮ್ಯಾನ್ಸ್‌ನಲ್ಲಿಯೂ ನಟಿಸಿರುವ ವಾಣಿ ಕಪೂರ್ ಈ ಚಿತ್ರದ ಬಗ್ಗೆ ಉತ್ಸುಕರಾಗಿದ್ದಾರೆ. ನಿರ್ದೇಶಕ ಕರಣ್ ಮಲ್ಹೋತ್ರಾ ಈ ಚಿತ್ರದ ಪಾತ್ರಕ್ಕೆ ವಾಣಿ ಹೇಳಿ ಮಾಡಿಸಿದಂತಿದ್ದಾರೆ ಎಂದು ಮೆಚ್ಚುಗೆಯನ್ನೂ ಸೂಸಿರುವುದು ಅವರ ಉತ್ಸಾಹ ಇಮ್ಮಡಿಯಾಗಿದೆ.

ವಾಣಿ, ಸಮರ್ಥ ನಟಿ, ನೃತ್ಯಾಂಗನೆ ಮತ್ತು ಸುಂದರ ತಾರೆ. ತೆರೆಯ ಮೇಲೆ ತಾಜಾಮುಖವೊಂದನ್ನು ತೋರಿಸಲು ನಾವು ಹಾತೊರೆಯುತ್ತಿದ್ದೆವು. ವಾಣಿ ಅದಕ್ಕೆ